



ಅನಿಕೇತನ ಓದುಗರಿಗೆ ಹೊಸ ವರ್ಷದ ಶುಭಾಷಯಗಳು

# ಅನಿಕೇತನ

# ANIKETANA

ಡಾ ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯ

ಆಗು ನೀ ಅನಿಕೇತನ
BE BOUNDLESS

Dr. Manmohan Singh Bengaluru City University

ಸಂಪುಟ 01 | ಸಂಚಿಕೆ 03 | ಬೆಂಗಳೂರು | January 2026 | ಪುಟ 01

Monthly Campus Journal by the Department of Mass Communication and Journalism. (For Private Circulation Only)


# ವಿಶ್ವ ಮಾನವ ದಿನಾಚರಣೆ – ನೂತನ ಪ್ರಸಾರಾಂಗ ಉದ್ಘಾಟನೆ

## ಕುವೆಂಪು ವೈಚಾರಿಕ ಪ್ರಜ್ಞೆ ಯುವ ಪೀಳಿಗೆಗೆ ದಾರಿದೀಪ



ಪುಸ್ತಕಗಳ ಬಿಡುಗಡೆ ಮೂಲಕ ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಪ್ರಸಾರಾಂಗ ಉದ್ಘಾಟನೆ

ರಾಷ್ಟ್ರ ಕವಿ ಕುವೆಂಪುರವರ ವಿಶ್ವಮಾನವ ಸಂದೇಶವನ್ನು ಎತ್ತಿಹಿಡಿಯುವ ಮೂಲಕ ಸಮಸಮಾಜ ನಿರ್ಮಾಣಕ್ಕೆ ಭದ್ರ ಬುನಾದಿ ಹಾಕಬೇಕೆಂದು ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷರು ಹಾಗೂ ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾದ ಪ್ರೊ. ಹಿ.ಚಿ. ಬೋರಲಿಂಗಯ್ಯನವರು ಯುವ ಸಮೂಹಕ್ಕೆ ಮನವಿ ಮಾಡಿದ್ದಾರೆ.

ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವತಿಯಿಂದ ಏರ್ಪಡಿಸಲಾಗಿದ್ದ ವಿಶ್ವಮಾನವ ದಿನಾಚರಣೆಯ ಸಮಾರಂಭ ಮತ್ತು ಪ್ರಸಾರಾಂಗವನ್ನು ಉದ್ಘಾಟಿಸಿ ಮಾತನಾಡಿದ ಅವರು ಕುವೆಂಪುರವರ ಪೂರ್ಣದೃಷ್ಟಿ ಕನ್ನಡ ಸಾಹಿತ್ಯದಲ್ಲಿ ನವಮನ್ವಂತರಕ್ಕೆ ನಾಂದಿಯಾಯಿತೆಂದು ಪ್ರತಿಪಾದಿಸಿದರು.

ಮೈಸೂರು ವಿಶ್ವ ವಿದ್ಯಾಲಯದ ಕುಲಪತಿಗಳಾಗಿದ್ದ ಕುವೆಂಪುರವರು ಅಧ್ಯಯನಾಂಗ, ಸಂಶೋಧನಾಂಗ ಮತ್ತು ಪ್ರಸಾರಾಂಗ ಎಂಬ ಮೂರು ಆಯಾಮಗಳ ಮೂಲಕ ಉನ್ನತ ಶಿಕ್ಷಣಕ್ಕೆ ಪರಿಪೂರ್ಣತೆಯ ಮಾರ್ಗ ತೆರೆದಿಟ್ಟರೆಂದು ಅವರು ವಿವರಿಸಿದರು. ಪ್ರಕೃತಿಯ ಆರಾಧಕರಾದ ಕುವೆಂಪುರವರು ಕಂದಾಚಾರ ಮತ್ತು ಮೂಢನಂಬಿಕೆ ವಿರುದ್ಧ ಸೆಣಸಾಡುವ ಜೊತೆಗೆ ಜಾತಿ ವರ್ಣ ವ್ಯವಸ್ಥೆಯ ವಿರುದ್ಧ ಸಮರ ಸಾರಿ ಮನುಜಪಥದ ಸಂದೇಶ ಪ್ರಚುರಪಡಿಸಿದರೆಂದು ಅವರು ವಿಶ್ಲೇಷಿಸಿದರು.

ಸಮಾರಂಭದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಹಿರಿಯ ನಟಿ, ಮಾಜಿ ಸಚಿವೆ ಡಾ. ಉಮಾಶ್ರೀಯವರು ತಮ್ಮ ರಂಗಭೂಮಿ ಮತ್ತು ಚಲನಚಿತ್ರ ರಂಗದ ಅನುಭವಗಳನ್ನು ತೆರೆದಿಟ್ಟು ಕನ್ನಡ ಭಾಷೆಯನ್ನು ಉಳಿಸಿ ಬೆಳೆಸುವಂತೆ ವಿದ್ಯಾರ್ಥಿಗಳನ್ನು ಪ್ರೇರೇಪಿಸಿದರು.

ಬದುಕಿನ ಅನಿವಾರ್ಯತೆಗಾಗಿ ಇಂಗ್ಲೀಷ್ ಬಳಸಿದರೂ ಮಾತೃ ಭಾಷೆಯಾದ ಕನ್ನಡವನ್ನು ಅಪ್ಪಿಕೊಂಡು ಮಾನವೀಯ ಮೌಲ್ಯ ರೂಢಿಸಿಕೊಂಡು ಕತ್ತಲೆಯಿಂದ ಬೆಳಕಿನೆಡೆಗೆ ಸಾಗುವಂತೆ ಅವರು ವಿದ್ಯಾರ್ಥಿಗಳನ್ನು ಉತ್ತೇಜಿಸಿದರು.

ಮೊಬೈಲ್ ಮೂಲಕ ಲಭ್ಯವಾಗುವ ಉಪಯುಕ್ತ ಮಾಹಿತಿಗಳನ್ನು ಬಳಸಿಕೊಂಡರೂ ಪುಸ್ತಕ ಓದುವ ಹವ್ಯಾಸ ಬೆಳೆಸಿಕೊಳ್ಳುವಂತೆ ಅವರು ಕಿವಿಮಾತು ಹೇಳಿದರು. ಪುಟ್ನಂಜ ಚಲನಚಿತ್ರ ಮತ್ತು ರಕ್ತಾಕ್ಷಿ ನಾಟಕದ ಸಂಭಾಷಣೆಯ ಮೂಲಕ ಸಭಿಕರನ್ನು ಅವರು ರಂಜಿಸಿದರು.

ಕುವೆಂಪು ವಿಶ್ವವಿದ್ಯಾಲಯದ ಹಿರಿಯ ಪ್ರಾಧ್ಯಾಪಕರಾದ ಪ್ರೊ. ಜಿ. ಪ್ರಶಾಂತ ನಾಯಕ್ ಕುವೆಂಪು ಸಾಹಿತ್ಯದ ಮಹತ್ವವನ್ನು ವಿವರಿಸಿದರು. ಶ್ರೀರಾಮಾಯಣ ದರ್ಶನಂ ಮೂಲಕ ಮೂಲ ರಾಮಾಯಣದ ದೋಷಗಳನ್ನು ಕುವೆಂಪು ತಿದ್ದಿದರೆಂದು ಅವರು ವ್ಯಾಖ್ಯಾನಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ.ರಮೇಶ್.ಬಿ. ಮಾತನಾಡಿ ಅಧಿಕಾರ ವಂಚಿತ ಸಮುದಾಯಗಳ ಪರವಾಗಿ ದನಿ ಎತ್ತಿದವರಲ್ಲಿ ಕುವೆಂಪು ಅತ್ಯಂತ ಪ್ರಮುಖರೆಂದು ಬಣ್ಣಿಸಿದರು.

ಸಾಮಾಜಿಕ ಸಮಾನತೆಯ ಜೊತೆಗೆ ಲಿಂಗ ತಾರತಮ್ಯ ನಿವಾರಣೆಗೆ ಶ್ರಮಿಸಿದ ಕುವೆಂಪು ಕನ್ನಡದಲ್ಲಿ ವಿಶ್ವ ಶ್ರೇಷ್ಠ ಸಾಹಿತ್ಯ ಸೃಷ್ಟಿಸಿದ ಮಹಾನ್ ಮಾನವತಾವಾದಿ ಎಂದು ಅವರು ವಿವರಿಸಿದರು.

ಕೌಶಲ್ಯ ಕಲಿಕೆಯ ಜೊತೆಗೆ ವಿದ್ಯಾರ್ಥಿಗಳಲ್ಲಿ ತಾತ್ವಿಕ ಮತ್ತು ಬೌದ್ಧಿಕ ಅರಿವು ಮೂಡಿಸಲು ಪೂರಕವಾದ ಶೈಕ್ಷಣಿಕ ಚಟುವಟಿಕೆಗಳನ್ನು ವಿಶ್ವವಿದ್ಯಾನಿಲಯ ಹಮ್ಮಿಕೊಂಡಿದೆ ಎಂದು ಕುಲಪತಿಗಳು ತಿಳಿಸಿದರು.

**ಪುಸ್ತಕಗಳ ಬಿಡುಗಡೆ:**

ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ನೂತನ ಪ್ರಸಾರಾಂಗದ ಮೊದಲ ಕಂತಾಗಿ ಪ್ರೊ.ಪ್ರಶಾಂತ ನಾಯಕ್ ರವರ "ನಮ್ಮ ಕುವೆಂಪು" ಮತ್ತು ಪ್ರೊ.ಟಿ. ಎನ್. ತಾಂಡವಗೌಡರವರ "ಕೃತಕ ಬುದ್ಧಿಮತ್ತೆಯ ಮೂಲಕ ಬೋಧನಾ ಕೌಶಲ್ಯ ಅಭಿವೃದ್ಧಿ" ಕೃತಿಗಳನ್ನು ಬಿಡುಗಡೆ ಮಾಡಲಾಯಿತು.

**ನಾಟಕ ಪ್ರದರ್ಶನ:**

ಸ್ನಾತಕೋತ್ತರ ವಿದ್ಯಾರ್ಥಿಗಳು ರಂಗಾಯಣ ಮಾಜಿ ನಿರ್ದೇಶಕ ಸಿ. ಬಸವಲಿಂಗಯ್ಯ ನಿರ್ದೇಶನದಲ್ಲಿ ಕುವೆಂಪು ವಿರಚಿತ "ಶೂದ್ರ ತಪಸ್ವಿ" ನಾಟಕವನ್ನು ಅಭಿನಯಿಸಿದರು. ಡಾ.ವೇಮಗಲ್ ನಾರಾಯಣಸ್ವಾಮಿ ತಂಡದಿಂದ ಗೀತಗಾಯನ ಏರ್ಪಡಿಸಲಾಗಿತ್ತು.

ಕುಲಸಚಿವ (ಮೌಲ್ಯಮಾಪನ) ಪ್ರೊ.ರಮೇಶ್.ಬಿ.ಕುಡೇನಟ್ಟಿ, ವಿತ್ತಾಧಿಕಾರಿ ಎಂ.ವಿ.ವಿಜಯಲಕ್ಷ್ಮಿ, ಸಿಂಡಿಕೇಟ್ ಸದಸ್ಯರಾದ ಡಾ.ಬಿ.ಆರ್.ಸುಪ್ರೀತ್, ಡಾ.ಎಚ್. ಕೃಷ್ಣರಾಮ್, ಕೆ.ಪಿ ಪಾಟೀಲ್, ಶಿಲ್ಪಶ್ರೀ, ಶಿವಕುಮಾರ್ ಮತ್ತು ವಿದ್ಯಾವಿಷಯಕ ಪರಿಷತ್ತಿನ ಸದಸ್ಯರಾದ ಡಾ. ಬಿ.ಕೆ ಗಿರಿ, ಡಾ.ಅಬ್ದುಲ್ ಖಾದರ್, ಡಾ. ಕೃಷ್ಣಮೂರ್ತಿ.ಜಿ., ಎಂ.ಟಿ.ಶ್ರೀನಿವಾಸ್, ಉಪಸ್ಥಿತರಿದ್ದರು. ಕನ್ನಡ ವಿಭಾಗದ ಮುಖ್ಯಸ್ಥರಾದ ಪ್ರೊ. ಟಿ. ಎನ್ ತಾಂಡವಗೌಡ ಸ್ವಾಗತಿಸಿದರು. ಡಾ. ಗಂಗಪ್ಪ, ಡಾ. ಕುಮಾರ್, ಡಾ. ಮಂಜು ಅತಿಥಿಗಳನ್ನು ಪರಿಚಯಿಸಿದರು, ಡಾ. ಅಖ್ತರ್ ಕಾರ್ಯಕ್ರಮ ನಿರೂಪಿಸಿದರು.



ಕುವೆಂಪು ವಿರಚಿತ ಶೂದ್ರ ತಪಸ್ವಿ ನಾಟಕದ ಕಲಾವಿದರು ಮತ್ತು ತಂತ್ರಜ್ಞರೊಂದಿಗೆ ಕುಲಪತಿಗಳು

**ಪಾತ್ರ ಪರಿಚಯ/ ನಿರ್ಮಾಣ ನೆರವು**

ವೃಕ್ಷಭೈರವ–ರಂಜಿತ್,ಉಷಾಕಿರಣ,
ಧನಂಜಯ, ಮೋನಿಕಾ, ಜ್ಯೋತಿ
ಮೃತ್ಯು–ಸುಷ್ಮಿತ, ನಿಸರ್ಗ, ಪೂಜಾ
ಬ್ರಾಹ್ಮಣ–ಲಕ್ಷ್ಮಿತಾ, ಉದಯಕುಮಾರ್
ಬ್ರಾಹ್ಮಣ ಕುಮಾರ–ಪುಷ್ಪ.
ಶ್ರೀರಾಮ–ರಕ್ಷಾ, ಜಬೀನಾ, ಪ್ರವೇಕ್
ಶಂಬೂಕ–ಧನಂಜಯ, ಮೇಳ– ಪ್ರವೇಕ್
ಸಹ ನಿರ್ದೇಶನ– ಅಕ್ಷರ ವೇಣುಗೋಪಾಲ
ರಂಗಚಲನೆ–ಜಲಜಾ ಕುಂದಾಪುರ
ರಂಗವಿನ್ಯಾಸ– ಶಶಿಧರ ಅಡಪ.
ಸಂಗೀತ ನಿರ್ದೇಶನ – ಸುಬ್ರಮಣ್ಯ ಎಸ್.
ಹಾಡುಗಾರಿಕೆ – ಮೇಘ ಅರ್.ಕೆ.
ರಂಗ ಪರಿಕರ – ಪ್ರಶಾಂತ್

# ಬಾಗಲೂರು ಸ್ನಾತಕೋತ್ತರ ಕೇಂದ್ರದ ಉದ್ಘಾಟನೆ

ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಬಾಗಲೂರಿನಲ್ಲಿ ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ನೂತನ ಸ್ನಾತಕೋತ್ತರ ಕೇಂದ್ರವನ್ನು ಉನ್ನತ ಶಿಕ್ಷಣ ಸಚಿವರಾದ ಡಾ. ಎಂ.ಸಿ. ಸುಧಾಕರ್, ಡಿಸೆಂಬರ್ 23 ರಂದು ವಿಧ್ಯುಕ್ತವಾಗಿ ಉದ್ಘಾಟಿಸಿದರು.

ಸರ್ಕಾರಿ ಪದವಿಪೂರ್ವ ಕಾಲೇಜಿನ ಆವರಣದಲ್ಲಿ ಏರ್ಪಡಿಸಲಾಗಿದ್ದ ಸಮಾರಂಭದಲ್ಲಿ ಅವರು ಶಿಲಾಫಲಕವನ್ನು ಅನಾವರಣಗೊಳಿಸಿ ಶುಭ ಹಾರೈಸಿದರು. ಉನ್ನತ ಶಿಕ್ಷಣದ ಸೌಲಭ್ಯ ವಿಸ್ತರಣೆಯ ಜೊತೆಗೆ ಗುಣಮಟ್ಟದ ಬಗ್ಗೆಯೂ ಅಗತ್ಯ ಗಮನ ಹರಿಸಬೇಕೆಂದು ಅವರು ಸೂಚಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಬ್ಯಾಟರಾಯನಪುರ ಕ್ಷೇತ್ರದ ಶಾಸಕರೂ ಆದ ಕಂದಾಯ ಸಚಿವ ಕೃಷ್ಣಭೈರೇಗೌಡರವರು ನೂತನ ಸ್ನಾತಕೋತ್ತರ ಕೇಂದ್ರಕ್ಕೆ ಅಗತ್ಯವಿರುವ ಭೂಮಿ ಮತ್ತು ಮೂಲಸೌಕರ್ಯ ಒದಗಿಸುವ ಭರವಸೆಯಿತ್ತರು.

ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ರಮೇಶ್. ಬಿ. ಪ್ರಾಸ್ತಾವಿಕವಾಗಿ ಮಾತನಾಡಿ ಬಡ ಮತ್ತು ಮಧ್ಯಮ ವರ್ಗದ ವಿದ್ಯಾರ್ಥಿಗಳಿಗೆ ಕಡಿಮೆ ವೆಚ್ಚದಲ್ಲಿ ಉತ್ತಮ ಗುಣಮಟ್ಟದ ಉನ್ನತ ಶಿಕ್ಷಣ ಒದಗಿಸುವ ನಿಟ್ಟಿನಲ್ಲಿ ಈ ಸ್ನಾತಕೋತ್ತರ ಕೇಂದ್ರ ಮಹತ್ವದ ಹೆಜ್ಜೆಯಾಗಿದೆ ಎಂದು ಬಣ್ಣಿಸಿದರು.




ಬಾಗಲೂರು ಸ್ನಾತಕೋತ್ತರ ಕೇಂದ್ರದ ಉದ್ಘಾಟನಾ ಸಮಾರಂಭ

ವಿಶ್ವವಿದ್ಯಾನಿಲಯದ ಕುಲಸಚಿವರಾದ ಎ. ನವೀನ್ ಜೋಸೆಫ್, ಕುಲಸಚಿವ (ಮೌಲ್ಯಮಾಪನ) ರಮೇಶ್.ಬಿ. ಕುಡೇನಟ್ಟಿ, ವಿತ್ತಾಧಿಕಾರಿಗಳಾದ ಎಂ.ವಿ. ವಿಜಯಲಕ್ಷ್ಮಿ, ಸ್ನಾತಕೋತ್ತರ ಕೇಂದ್ರದ ನಿರ್ದೇಶಕರಾದ ಪ್ರೊ.ರಿತಿಕಾ ಸಿನ್ಹಾ, ಸಿಂಡಿಕೇಟ್ ಮತ್ತು ವಿದ್ಯಾವಿಷಯಕ ಪರಿಷತ್ತಿನ ಸದಸ್ಯರು ಹಾಗೂ ಬಾಗಲೂರು ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಎ.ಕೆಂಪೇಗೌಡರು ಸಮಾರಂಭದಲ್ಲಿ ಉಪಸ್ಥಿತರಿದ್ದರು.

# ಅಂಗಳದಲ್ಲಿ ತಿಂಗಳ ಪುಸ್ತಕ

ರಾಷ್ಟ್ರಕವಿ ಕುವೆಂಪುರವರ 121ನೇ ಜನ್ಮದಿನದ ಅಂಗವಾಗಿ ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರದ ಆಶ್ರಯದಲ್ಲಿ "ಮಲೆಗಳಲ್ಲಿ ಮದುಮಗಳು ಕಾದಂಬರಿಯ ಪಾತ್ರಾವಲೋಕನ" ಕುರಿತು ಡಿಸೆಂಬರ್ 31ರಂದು ವಿಶೇಷ ಉಪನ್ಯಾಸ ಏರ್ಪಡಿಸಲಾಗಿತ್ತು. ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಮಾನಸ ಕಾರ್ಯಕ್ರಮ ಉದ್ಘಾಟಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಗಾಯಿತ್ರಿ ಕೆ. ಎಂ. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಕುಲಪತಿಗಳಾದ ಪ್ರೊ. ರಮೇಶ್.ಬಿ. ಅಧ್ಯಕ್ಷತೆ ವಹಿಸಿದ್ದರು.

ವಿಶೇಷ ಉಪನ್ಯಾಸ ನೀಡಿದ ಖ್ಯಾತ ಸಾಹಿತಿ ಡಾ. ಕೆ.ವೈ. ನಾರಾಯಣಸ್ವಾಮಿಯವರು ಮನುಷ್ಯ ಸ್ವಭಾವಗಳನ್ನು, ಕಾಲದೇಶಗಳನ್ನು, ಭಾವನಾತ್ಮಕ ಏರು–ಪೇರುಗಳನ್ನು ಕುವೆಂಪು ಪೂರ್ಣದೃಷ್ಟಿಯಿಂದ ಗ್ರಹಿಸಿ ಪಾತ್ರಗಳ ಮೂಲಕ, ಸನ್ನಿವೇಶಗಳನ್ನು ಚಿತ್ರಿಸಿದರೆಂದು ವಿವರಿಸಿದರು. ಈ ಕಾದಂಬರಿಯಲ್ಲಿ ಬರುವ ಪಾತ್ರಗಳೆಲ್ಲವೂ ಜೀವ ಸಂಘರ್ಷದ ಕತೆಗಳನ್ನು ಸಾರುತ್ತವೆಂದು ಅವರು ವಿಶ್ಲೇಷಿಸಿದರು. ಕನ್ನಡ ಪುಸ್ತಕ ಪ್ರಾಧಿಕಾರದ ಆಡಳಿತಾಧಿಕಾರಿ ಕಿರಣ್ ಸಿಂಗ್ ಸ್ವಾಗತಿಸಿದರು. ಡಾ.ಮಂಜು. ಸಿ. ಎನ್. ಕಾರ್ಯಕ್ರಮ ನಿರೂಪಿಸಿದರು.

# 69ನೇ ಮಹಾಪರಿನಿರ್ವಾಣ ದಿನಾಚರಣೆ – ಅಂಬೇಡ್ಕರ್ ಚಿಂತನೆ ಸ್ಮರಣೆ

**– ಡಾ. ನಾಗರಾಜು ಆರ್. ಕೆ. ಉಪನ್ಯಾಸಕರು, ಸಮಾಜಶಾಸ್ತ್ರ**

ಗಂಭೀರ ಬಿಕ್ಕಟ್ಟಿನಲ್ಲಿ ಸಿಲುಕಿರುವ ಸಾರ್ವಜನಿಕ ವಿಶ್ವವಿದ್ಯಾಲಯಗಳ ಪುನಶ್ಚೇತನಕ್ಕೆ ರಾಜ್ಯ ಸರ್ಕಾರ ತುರ್ತು ಗಮನ ಹರಿಸಬೇಕೆಂದು ವಿಧಾನ ಪರಿಷತ್ ಸದಸ್ಯರಾದ ಶಿವಕುಮಾರ್.ಕೆ. ಮನವಿ ಮಾಡಿದ್ದಾರೆ.

ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಡಾ. ಬಿ.ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರದ ವತಿಯಿಂದ 2025 ಡಿಸೆಂಬರ್ 6ರಂದು ಏರ್ಪಡಿಸಲಾಗಿದ್ದ 69ನೇ ಮಹಾಪರಿನಿರ್ವಾಣ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಖಾಯಂ ಬೋಧಕ–ಬೋಧಕೇತರ ಸಿಬ್ಬಂದಿಯ ತೀವ್ರ ಕೊರತೆಯಿಂದಾಗಿ ಸಾರ್ವಜನಿಕ ವಿಶ್ವವಿದ್ಯಾಲಯಗಳ ಭವಿಷ್ಯ ಕ್ರಮೇಣ ಮಸುಕಾಗುತ್ತಿದೆ ಎಂದು ಅವರು ಆತಂಕ ವ್ಯಕ್ತಪಡಿಸಿದರು. ಮಂಜೂರಾದ ಹುದ್ದೆಗಳನ್ನು ಅರ್ಹತೆ ಮತ್ತು ಮೀಸಲಾತಿ ಮಾನದಂಡಗಳಿಗೆ ಅನುಗುಣವಾಗಿ ಶೀಘ್ರವೇ ಭರ್ತಿ ಮಾಡಬೇಕೆಂದು ಅವರು ಸರ್ಕಾರವನ್ನು ಒತ್ತಾಯಿಸಿದರು.



69ನೇ ಮಹಾಪರಿನಿರ್ವಾಣ ದಿನಾಚರಣೆ – ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪನಮನ

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಹಿರಿಯ ಪತ್ರಕರ್ತರಾದ ರಘುನಾಥ್ ಚ.ಹ. ಮಾತನಾಡಿ ವಿಷವನುಣಿಸಿದ ಸಮಾಜ–ಕ್ಕೆ ಅಮೃತ ಸಿಂಚನ ನೀಡಿದ ಅಂಬೇಡ್ಕರ್ ಕೇವಲ ಒಬ್ಬ ವ್ಯಕ್ತಿಯಾಗಿರದೆ ಸಾರ್ವತ್ರಿಕ ಮೌಲ್ಯವಾಗಿದ್ದಾರೆಂದುವಿಶ್ಲೇಷಿಸಿದರು. ಕೇರಳದಲ್ಲಿ ಸಾಮಾಜಿ–ಕ ನ್ಯಾಯದ ಆಂದೋಲನ ನಡೆಸಿದ ನಾರಾಯಣ ಗುರು ಮಾರ್ಗದಲ್ಲಿ ಮುನ್ನಡೆದ ಡಾ. ಅಂಬೇಡ್ಕರ್ ದೇಶಾದ್ಯಂತ ಸಮಾನತೆಯ ಸಂಘರ್ಷವನ್ನು ಪ್ರೇರೇಪಿಸಿದರೆಂದು ಅವರು ವಿವರಿಸಿದರು. ರಂಗಾಯಣದ ಮಾಜಿ ನಿರ್ದೇಶಕರಾದ ಸಿ. ಬಸವಲಿಂಗಯ್ಯನವರು ಮಾತನಾಡಿ ಅಂತರಂಗದಲ್ಲಿ ಮನುಸ್ಮೃತಿಯನ್ನು ಆರಾಧಿಸುತ್ತಾ ಬಹಿರಂಗದಲ್ಲಿ ಅಂಬೇಡ್ಕರ್ ಸಂವಿಧಾನದ ಗುಣಗಾನ ಮಾಡುವವರಿಂದ ಸಮಾನತೆಯ ಗುರಿ ಸಾಧನೆಯಾಗದೆಂದು ಪ್ರತಿಪಾದಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕುಲಪತಿಗಳಾದ ಪ್ರೊ. ರಮೇಶ್ .ಬಿ. ಮಾತನಾಡಿ ಅಂಬೇಡ್ಕರ್ ತತ್ವ ಚಿಂತನೆ 'ಆಗಿಹೋದ ಕಥೆಯಾಗಿರದೆ ಆಗಬೇಕಾದ ಕಥೆ' ಎಂದು ಸೂಚ್ಯವಾಗಿ ನುಡಿದರು. ಭಾರತೀಯ ಸಮಾಜದಲ್ಲಿನ ಜಾತಿ, ವರ್ಣ, ವರ್ಗ, ಲಿಂಗ ಅಸಮಾನತೆಗಳ ನಿವಾರಣೆಗೆ ಸಂವಿಧಾನದ ಚೌಕಟ್ಟಿನಲ್ಲಿ ಪ್ರಜಾತಾಂತ್ರಿಕ ಪರ್ಯಾಯಗಳನ್ನು ಹುಡುಕುವ ಮೂಲಕ ಪರಿಹಾರ ಕಂಡುಕೊಳ್ಳಬಹುದಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

ಕುಲಸಚಿವರಾದ ನವೀನ್ ಜೋಸೆಫ್.ಎ., ಕುಲಸಚಿವ (ಮೌಲ್ಯಮಾಪನ) ಪ್ರೊ. ರಮೇಶ್.ಬಿ. ಕುಡೇನಟ್ಟಿ, ವಿತ್ತಾಧಿಕಾರಿಗಳಾದ ಎಂ.ವಿ. ವಿಜಯಲಕ್ಷ್ಮಿ, ಪ್ರೊ. ಪಿ.ಆರ್. ಚೇತನಾ ಉಪಸ್ಥಿತರಿದ್ದರು.

ಉಪನ್ಯಾಸಕರಾದ ಡಾ.ಕುಮಾರ್ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಡಾ.ಸದಾನಂದ ಮತ್ತು ಚರಣ್ ಕಾರ್ಯಕ್ರಮ ನಿರೂಪಿಸಿದರು. ಡಾ.ಆರ್.ಕೆ. ನಾಗರಾಜ್ ಮತ್ತು ಡಾ.ಸಂಗಪ್ಪ ವಗ್ಗಾರ್ ಅತಿಥಿಗಳನ್ನು ಪರಿಚಯಿಸಿದರು. ಡಾ. ತೇಜೇಶ್ವರ ಸ್ವಾಗತಿಸಿ ಡಾ. ಕಾಂತರಾಜ್. ವಿ. ವಂದಿಸಿದರು. ಡಾ.ಪ್ರಭು ಜಿ.ಎಂ. ಮತ್ತು ಡಾ. ಮಂಜು ಸಿ.ಎನ್ ತಂಡದವರು ಜಾಗೃತಿ ಗೀತೆಗಳನ್ನು ಹಾಡಿದರು.

**ಪ್ರಬಂಧ ಸ್ಪರ್ಧೆ ವಿಜೇತರು:**

ಮಹಾಪರಿನಿರ್ವಾಣ ದಿನಾಚರಣೆಯ ಪ್ರಯುಕ್ತ ಏರ್ಪಡಿಸಲಾಗಿದ್ದ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ಬಿಬಿಎ ವಿದ್ಯಾರ್ಥಿನಿ ಮಾನ್ಯ ಟಿ.ಜಿ., ಸ್ನಾತಕೋತ್ತರ ವಿದ್ಯಾರ್ಥಿನಿಯರಾದ ಪೂಜಾ .ವೈ. (ಇತಿಹಾಸ) ಮತ್ತು ಸ್ಪಂದನ ಎನ್.ಜೆ. (ಸಮಾಜಶಾಸ್ತ್ರ) ಅತಿಥಿಗಳಿಂದ ಬಹುಮಾನಗಳನ್ನು ಸ್ವೀಕರಿಸಿದರು.

# ಏಡ್ಸ್ ಜಾಗೃತಿ ಕಾರ್ಯಕ್ರಮ

ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ವಿಶ್ವ ಏಡ್ಸ್ ದಿನಾಚರಣೆ ಅಂಗವಾಗಿ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಸರ್ ಎಂ. ವಿಶ್ವೇಶ್ವರಯ್ಯ ಮೆಟ್ರೋ ನಿಲ್ದಾಣದಿಂದ ಸೆಂಟ್ರಲ್ ಕಾಲೇಜಿನ ಗಡಿಯಾರ ಗೋಪುರದವರೆಗೆ ವಿದ್ಯಾರ್ಥಿಗಳು ಜಾಥಾ ನಡೆಸಿದರು.

ಪೊಲೀಸ್ ಇಲಾಖೆ ವತಿಯಿಂದ ಮಹಿಳೆಯರ ರಕ್ಷಣೆ ಹಾಗೂ ಏಡ್ಸ್ ದುಷ್ಪರಿಣಾಮಗಳ ಕುರಿತು ಮಾಹಿತಿ ಒದಗಿಸಲಾಯಿತು. ಸಮಾಜಕಾರ್ಯ ವಿಭಾಗದ ವಿದ್ಯಾರ್ಥಿಗಳು ಬೀದಿ ನಾಟಕ ಪ್ರದರ್ಶಿಸಿದರು. ಕುಲಪತಿಗಳಾದ ಪ್ರೊ.ಬಿ.ರಮೇಶ್, ಕುಲಸಚಿವರಾದ ಎ. ನವೀನ್ ಜೋಸೆಫ್, ಕುಲಸಚಿವರು (ಮೌಲ್ಯಮಾಪನ) ಪ್ರೊ. ರಮೇಶ್. ಬಿ. ಕುಡೇನಟ್ಟಿ ಮತ್ತು ಸಮಾಜಕಾರ್ಯ ವಿಭಾಗದ ಮುಖ್ಯಸ್ಥರಾದ ಪ್ರೊ. ರಿತಿಕಾ ಸಿನ್ಹಾ ಉಪಸ್ಥಿತರಿದ್ದರು.

**ವಿಶೇಷ ಉಪನ್ಯಾಸ:**

ಸಮಾಜ ಕಾರ್ಯ ವಿಭಾಗದ ವತಿಯಿಂದ ಏಡ್ಸ್ ಕು–ರಿತು ವಿಶೇಷ ಉಪನ್ಯಾಸ ಆಯೋಜಿಸಲಾಗಿತ್ತು.

ಮಾಗಡಿಯ ಸರ್ಕಾರಿ ಜನರಲ್ ಆಸ್ಪತ್ರೆಯ ಐಸಿಟಿಸಿ ಕೌನ್ಸೆಲರ್ ವರುಣ್ ಕುಮಾರ್ ಎಚ್‌ಐವಿ ಮತ್ತು ಏಡ್ಸ್ ನಡುವಿನ ಪ್ರಮುಖ ವ್ಯತ್ಯಾಸಗಳು ಮತ್ತು ಪ್ರಸರಣದ ನಾಲ್ಕು ಪ್ರಮುಖ ಮಾರ್ಗಗಳನ್ನು ವಿವರಿಸಿದರು. ಉಪನ್ಯಾಸಕರಾದ ಡಾ. ಸಂಗಪ್ಪ ವಗ್ಗರ್ ಕಾರ್ಯಕ್ರಮ ನಿರ್ವಹಿಸಿದರು.



ವಿಶ್ವ ಏಡ್ಸ್ ದಿನಾಚರಣೆ ಅಂಗವಾಗಿ ಸೆಂಟ್ರಲ್ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಜಾಥಾ

## Commerce Dept. Ph.D Awardees

Research scholars of commerce department, Dr Manmohan Singh BCU have been awarded Ph.d under the guidance of Prof. K R Jalaja, Dean and Chairperson. **Nagesh N,** for the topic *'A Study on Impact of Intellectual Capital Management on Organizational Performance with reference to select Pharmaceutical Companies in Bengaluru'.* **Deeksha S,** for the topic *'A Study on Revitalization of Cultural Industries to Achieve Sustainability and Geo-Cultural Identity of Local Cultural Economies in India.'* **Indumathi B,** for the topic *'A Study on Issues and Challenges Relating to the Valuation of Bonds with Special Reference to Perpetual Bonds in India'.*

**IMPORTANT NOTE**

Visit Dr Manmohan Singh Bengaluru City Uni-versity's official website **www.bcu.ac.in** for regular updates of Univeristy activities and also read ANIKETANA. Send Reports/Photos to **E-mail id : aniketana@bcu.ac.in**

## Special Lecture on Russia–Ukraine Conflict

**- Dr Amar S**

Political Science department organized a special lecture on "Russia–Ukraine Conflict: A Turning Point in World Politics." Dr. K.C.Suresh, Associate Professor, Tumkur University, offered an insightful overview of the historical evolution of Ukraine and its Soviet legacy. He explained the major factors that triggered the conflict, NATO's expansion and Russia's security concerns. He also discussed the global implications of the war, analysing the strategic interests of Russia and the United States in shaping the conflict. A significant segment of his talk highlighted the relevance of RIC (Russia–India–China) in today's shifting world order. He emphasized Russia's significance for India, particularly in areas such as defence cooperation, nuclear energy, space collaboration.

Another lecture was organized on "Ethics in Social Science Research and How to Write a Research Proposal". Dr.Poornima G.R emphasised how ethics and values are important for social science researchers to collect information from respondents. She also discussed the major challenges in social science research and various steps of research proposals.

A special lecture on ``Political Science Research in the 21st Century and Voting Behaviours in Indian General Elections" was organized on 30th December 2025. Prof. Veena Devi and Dr. Nagesh from BU opined that research is always appropriate if it is critical. In research studies, political science research has had a major impact in solving problems in various sectors and creating awareness with the help of digital data analytics.

# ಪ್ರಯುಕ್ತಿ ಕಾಲೇಜಿನಲ್ಲಿ ನೃತ್ಯಸಂಭ್ರಮ

ಪ್ರಯುಕ್ತಿ ವಿದ್ಯಾಸಂಸ್ಥೆಗಳ ಸಮೂಹ ಆಯೋಜಿಸಿದ್ದ ಅಂತರ ಶಾಲಾ–ಕಾಲೇಜು ನೃತ್ಯ ಸ್ಪರ್ಧೆಗಳ ಕಾರ್ಯಕ್ರಮ "ನೃತ್ಯಸಂಭ್ರಮ" ಬೆಂಗಳೂರಿನ ಆರ್.ಟಿ. ನಗರದ ಕಾಲೇಜಿನ ಸಭಾಂಗಣದಲ್ಲಿ ನೆರವೇರಿತು. ಕಾರ್ಯಕ್ರಮವನ್ನು ಉದ್ಘಾಟಿಸಿದ ಡಾ॥ ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ ಪ್ರೊ ರಮೇಶ್ ಬಿ. ರವರು ವಿದ್ಯಾರ್ಥಿಗಳ ಸರ್ವತೋಮುಖ ವ್ಯಕ್ತಿತ್ವದ ಬೆಳವಣಿಗೆಗೆ ಇಂತಹ ಸಾಂಸ್ಕೃತಿಕ ಚಟುವಟಿ–ಕೆಗಳು ನೆರವಾಗುತ್ತವೆಂದು ವಿಶ್ಲೇಷಿಸಿದರು,

ಪ್ರಾಂಶುಪಾಲರಾದ ಡಾ॥–ಎಸ್.ನಾಗರಾಜ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಕುಮಾರಿ ಸಿರಿ ಅತಿಕ್ಲಿಷ್ಟಕರ ಜಿಮ್ನಾಸ್ಟಿಕ್ ಭಂಗಿಗಳಿಂದ ವಿಶೇಷ ಗಮನ ಸೆಳೆದರು ಪ್ರಯುಕ್ತಿ ಸಮೂಹದ ಕಾರ್ಯದರ್ಶಿ ಬಾಬು.ವಿ. ಕಾರ್ಯಕ್ರಮ ನಿರ್ವಹಿಸಿದರು.



ಪ್ರಯುಕ್ತಿ ಕಾಲೇಜಿನ ವಿದ್ಯಾರ್ಥಿಗಳಿಂದ ಜಾನಪದ ನೃತ್ಯ ಪ್ರದರ್ಶನ

## Motivation to Young Aspirants by IFS Officer

A Special Talk on "Public Service and Its Relevance" was held at the JJ auditorium of DMSBCU on 24th December 2025.

Setting the intellectual and ethical tone of the programme,Vice Chancellor, Prof. Ramesh B, articulated a compelling vision of the university as a crucible for socially conscious leadership. He underscored that institutions of higher learning must go beyond degrees and examinations to cultivate integrity, empathy, and a deep sense of national responsibility among students.

The centerpiece of the event was the inspiring address by the eminent civil servant, Dr. D. Manjunatha, IFS, Chief Conservator of Forests and Chief Wildlife Warden, Government of Sikkim. Blending scholarship with lived administrative wisdom, Dr. Manjunatha spoke with rare authenticity about the ethical dilemmas, challenges, and quiet triumphs of public service. Director of pre-exam coaching cnetre Prof. Medha Itagi Huilgol presided over the program.

**-Dr Deeksha. S**

## History Department Symposium

**-Dr Purushotham. S**

History department co nducted one day Symposium on 'The Cultural Landscape of South India: Art, Nationalism and Social Reform'. The Symposium was launched by Dr.Thandava Gowda, incharge Chairperson of the department.

Prof.S.Chandrashekhar traces the birth and growth of Nationalism in Indian Sub continent with rich insightful instances. Prof.A.Ashwath Narayan described that the Social Reform efforts of yester years are more relevent in our today's vibrant Democracy. Prof. M. Jamuna in her address traced the development of structural temple architecture in South India with playing interesting slides.

## Economics Lecture Series

Department of Economics, has begun Lecture Series for the current academic year from 18th November 2025. Prof. Ritika Sinha, Chairperson of the department inaugurated the program. Dr. Koppa Kondal from Tami Nadu Central University spoke on research title, data analysis and report writing and Dr. Mohammed Shameer from Dr. Ambedkar School of Economics, Bengaluru explained the measures and criteria for Economic Research. . Mr. Thomas John Rose, Founder, Wise force Mission, Bengaluru engaged students on 15-12-2025 in a practical session with activities, exercises and real life examples to **“Transform Your Dreams into Achievable Goals”.** Mrs. Anusuya Kashi, Assistant Professor, Vivekananda College of Pharmacy, Bengaluru - delivered a talk on **“Impact of Cognitive Biases on Economic Decisons”** on 18-12-2025. The session involved Case Studies and Real Life Illustrations .

# Pre-University College Principals' Conclave

Dr. Manmohan Singh Bengaluru City University's College Development council, organized Pre-University College Principals' Conclave on December 30th at Jnanajyothi auditorium.

In his inaugural address, Puttanna, Member of the Legislative Council, expressed serious concern over the alarming situation of nearly 90% teaching vacancies in Public universities.

He observed that parental pressure often compels students to pursue medical and engineering streams, overlooking alternative skill-oriented and vocational career options.

He remarked that Pre-University education functions as a critical transitional phase, and without proper guidance from parents and institutions, students may be pushed towards unsuitable career paths.

Prof. Ramesh B, Vice-Chancellor, Dr. Manmohan Singh Bengaluru City University, elaborated on the objectives of the counselling meet and presented statistical data on student dropout rates in India.

Emphasizing the urgency of collaborative initiatives between Pre-University institutions and degree colleges, he outlined several job-oriented programmes introduced by the University during the current academic year.

He also noted that diploma and certificate courses in nearly 14 foreign languages, along with programmes in Artificial Intelligence, interior design, digital marketing, and large-scale employment initiatives, sports, and cultural activities, have been launched to ensure holistic student development.

Manojkumar Kolla, Additional Director, Department of School Education (PUC), Bengaluru South District, admitted that a significant gap has historically existed between Pre-University and degree colleges due to limited coordinated engagement.

Palaksha, Additional Director, Bengaluru North District, commended the initiative and described it as the first of its kind among state universities in Karnataka. Members of the Syndicate and Academic Council were present on the occasion. Dr. B R Suprith, Syndicate Member, welcomed the gathering, Prof. Shivashankar proposed the vote of thanks, and Ms. Vanishree compered the programme.

**- Dr. Tejeshwara I S, Department of English**



MLC Puttanna Addressing the Pre University College Principals at JJ auditorium

## CGL-Faculty Development Program



Participants of “La Magie de la Langue Française en Action avec L'IA.

**-Dr. Santhana Krishnan**

A two-day Faculty Development Program titled “La Magie de la Langue Française en Action avec L'IA.” was conducted on November 29–30, 2025, at the Centre for Global Languages, Dr.ManmohanSingh BCU, in collaboration with IFI and Langers. AI experts Dr. Neha Bansal, Dr Shekar Kalepu and Mr Hansu provided a comprehensive introduction to emerging AI-driven educational technologies and demonstrated their practical applications in French language teaching. Day 1 introduced AI concepts and tools, covering shifts in pedagogy, generative AI platforms such as ChatGPT and Claude for content creation, and AI-powered pronunciation tools. Day 2 focused on implementation, highlighting personalized learning platforms for educational institutions, exploring ethical considerations. The program culminated in a workshop where participants designed AI-integrated French lesson plans.

## MCJ MEDIA CLUB ACTIVITY

The Department of Mass Communication and Journalism-Media Club hosted investigative journalist Vijayalakshmi Shibaroor for an interactive session that provided students a good exposure to contemporary investigative journalism. She outlined how the field has evolved with faster news cycles, digital platforms, and heightened public scrutiny, noting that reporters must strike a balance between speed and accuracy to maintain credibility. Shibaroor spoke candidly about the occupational risks associated with investigative journalism including legal challenges, intimidation, and the pressure of navigating sensitive stories. She emphasised that ethical decision-making and personal integrity remain non-negotiable, especially when dealing with powerful institutions and vulnerable communities. Drawing from her three decade long career at various media houses, she explained how each newsroom shaped her approach to sourcing, verification, and field investigation. Media Club had organised an interactive session on 17th December featuring Manjunatha S, crime reporter from Vijay Karnataka. He delivered an insightful talk on present-day crime reporting, highlighting its challenges, ethical responsibilities.



MCJ Students with Vijyalaksmi Shibarooru Report: Varun S

## National Mathematics Day



Prof. S Bhargava

On the occasion of the birth anniversary of renowned Indian mathematical genius Srinivasa Ramanujan, National Mathematics Day was celebrated at the Central College campus. Prof. S. Bhargava, retired professor from the University of Mysore, delivered a special lecture on “The Legacy and Relevance of Srinivasa Ramanujan.” Prof. C. S. Aravinda, retired professor from the Centre for Applicable Mathematics, TIFR, attended the event as the chief guest. Presiding over the function, Vice-Chancellor Prof. Ramesh B. stated that the scholarly excellence of ancient mathematics forms the foundation of today's modern artificial intelligence technologies. Registrar A. Naveen Joseph, Registrar (Evaluation) Prof. Ramesh Kudenatti, and Syndicate members Dr. Krishnaram and K. P. Patil were present. Prof. Medha Itagi Huilgol, Chairperson of the dept. delivered introductory remakrs.Ms Aishwarya compered the program. Sandeep Shastri proposed vote of thanks. As part of the National Mathematics Day celebrations, an inter-collegiate-level mathematical talent competition titled **“Math-O-Mania 2025”** was organized.



Faculty of Mathematics with VC at Math-O-Manina

## Sociology Academic Activity

The Department of Sociology organised a special lecture on “Pathway to the Competative Exam: Journey towards Excellence" on 18-12-2025. Dr Nagendra M P, Associate Professor from Government Arts College has delivered special lecture emphasising various methods to crack Competitive Exams.

**BAMUL Unit Visit** The students and faculty of the Department of Sociology visited BAMUL - KMF unit in Bengaluru.

**- Dr. Savitha B C,**



Sociology Faculty and Students at BAMUL Unit

# Central College Sesquicentennial : 150 Years of Glory

**-Dr. Malini M, Faculty, Dept. of History.**

The Central College, Bengaluru, one of the most iconic heritage educational institutions of India, has just crossed 150 years landmark and stands as a living testament of academic excellence, cultural vibrancy, and social transformation. Renowned for its distinctive Gothic–Pompeian red architecture, long arched corridors, and lush green surroundings, the campus has witnessed historic events and nurtured generations of minds that have profoundly shaped Indian society. The origins of Central College date back to 1858, when the British rulers established a modest institution called Bangalore High School. As the demand for higher education grew, the school was upgraded to a First-Grade College in 1875 and renamed as Central College, with affiliation to the University of Madras. A major milestone came in 1916 with the establishment of the University of Mysore by His Highness Krishnaraja Wadiyar IV, the Maharaja of the erstwhile Princely State of Mysore, along with the visionary Diwan Sir M. Visvesvaraya. Under this reorganisation, science courses were concentrated at Central College in Bangalore, while arts courses were housed at the Maharaja College in Mysore. It was here in 1928, Sir C.V. Raman announced the discovery of the Raman Effect, a breakthrough that earned him the Nobel Prize in Physics. Over the decades, Central College has emerged as an alma mater to an extraordinary array of achievers. Among them are Bharata Ratna trios Sir M. Visvesvaraya, C. Rajagopalachari, and Prof. C.N.R. Rao, S.Nijalingappa and D.Devaraj Urs former Chief Ministers of Karnataka; Diwan Sir Mirza Ismail, Educationist Dr. H. Narasimhaiah; Kannada literary icons such as Masti Venkatesha Iyangar, V.Seetharamaiah, K.S.Narasimha Swamy, and L.S.Seshagiri Rao, A.N. Murthy Rao Social and Spiritual leader Dr.Shivakumara Swamiji, Freedom fighter H.S. Doreswamy; jurists Nittur Srinivasa Rao, N. Santosh Hegde, noted Kathak Dancer Maya Rao. The list of distinguished alumni associated with the campus is, indeed, unending. The campus has also played a significant role in the history of Indian sports. The Karnataka State Cricket Association, founded in 1933 (formerly known as Mysore Cricket Association), was born at Central College Cricket Ground. Until 1972, when matches were shifted to the Chinnaswamy Stadium, nearly 52 first-class cricket matches were played here. Legendary cricketers Gari Sobers, Neil Harvey, M.A.K.Pataudi, E.A.S.Prasanna, B.S.Chandrasekhar, G.R.Vishwanath, Brijesh Patel and Syed Kirmani have graced this historic ground. Apart from cricket this ground has nurtured many sports like hockey, football, basketball, kabadi, athletics. In the realm of culture, Central College emerged as a major centre for the development of modern Kannada literature during the 1920s. Literary stalwarts including B.M. Srikantaiah, A.R. Krishna Shastry, T.S.Venkanniah, G.P.Rajarathnam, G.S. Shivarudrappa, Kuvempu, P.Lankesh, and D.R.Nagaraj were closely associated with the campus, contributing significantly to Kannada modernist thought. The campus was also an epicentre of socio-cultural and political movements, including Dalit and Bandaya literary movements and Gokak agitation. Central College ground holds an historical record in the unification of Karnataka, as the then President of India Dr.Rajendra Prasad formally declared the formation of new state here on 1st November 1956. His Highness Jayachamaraja Wadiyar, Maharaja of Mysore sworn in as the first Governor and Mr.S.Nijalingappa as the Chief minister of the state. To meet the growing demand for higher education in the region, Bangalore University was established in 1964 as an offshoot of the University of Mysore and functioned from the Central College Campus until the establishment of the Jnana Bharathi campus in 1973. At present, the Central College Campus houses Dr.Manmohan Singh Bengaluru City University, which was established in 2017 following the trifurcation of Bangalore University.



Old Photo of Central College Source: The Hindu

# Golden Jubilee of ICDS

## Anganawadi Workers still not rewarded

**-Vanishree. M, Faculty, Dept. of Social Work**

Integrated Child Development Services (ICDS) scheme has traversed 50 years mark and the attention turns sharply towards Anganwadi workers and helpers who have sustained the programme since 1975. These women form the foundation of India's early childhood care and education (ECCE) system, ensuring that children under six receive nutrition, pre-school learning and basic health support. Despite their indispensable role, they continue to be labeled only as "voluntary workers," their honorariums, often far below minimum-wage standards, along with the absence of job security, pensions, and social protection, highlight a persistent gap between their responsibilities and recognition. Their responsibilities have grown significantly over the decades, especially with the increasing emphasis on ECCE after the National Education Policy (NEP) 2020. Anganwadi workers today must deliver structured, activity-based early learning programmes for children aged 3–6, maintain digital records through the POSHAN Tracker, support supplementary nutrition distribution, monitor growth, conduct home visits, and assist in immunisation. Yet, many Anganwadi centres continue to function in inadequate buildings with poor infrastructure and limited teaching materials. The digital transformation of ICDS has added new layers of work without providing reliable connectivity, adequate training, or the devices needed to perform these tasks efficiently. Beyond their core ICDS duties, Anganwadi workers are increasingly assigned additional responsibilities during voter list revisions and election-related activities. Their tasks often include assisting surveys, conducting census operations, participating in health campaigns. Anganwadi workers are demanding fair wages, retirement benefits, and government-employee status.




Anganawadi Centre Source: Web

# SPORTS NEWS

## All India Inter University Aquatics




Naisha Shetty(Top Left) with the silver medal.

Dr Manmohan Singh Bengaluru City University has bagged 4 Medals in All India Inter University Aquatics Tournament - 2025 held at SRM University, Kattankulathur, Chengalpattu, Tamil Nadu. Naisha Shetty of St. Joesph Commerce College, Bengaluru won 2 silver medals and 1 bronze medal in different swimming events. Shuthi K R of SICM, Shehasdripuram, Bengaluru won bronze medal in 100 meters backstroke event.

## University College for Women - NSS Camp at Shivaganga Kshethra, Dabaspet Taluk.




**ಸಂಪಾದಕೀಯ ಮಂಡಳಿ**

**ಡಾ. ಟಿ. ಎನ್. ತಾಂಡವ ಗೌಡ,**
ಸಂವಹನ ವಿಭಾಗ ಮುಖ್ಯಸ್ಥರು.
**ಎಸ್. ಆರ್. ಆರಾಧ್ಯ,**
ಮಾಧ್ಯಮ ಸಮಾಲೋಚಕರು.
**ಡಾ. ಪ್ರವೀಣ ಡಿ.ಎಸ್.**
**ಡಾ. ಮರಿಸ್ವಾಮಿ.**
**ಡಾ. ತೇಜಸ್ವಿನಿ ದೇವಕುಮಾರ್.**
**ಡಾ. ನಂದೀಶ ಎನ್.**
**ಡಾ. ಶ್ರೀನಿವಾಸ್ ಸಿ.ಎನ್.**
**ಸರ್ವಜಿತ್ ಕುಮಾರ್ ಜೆ.ಎನ್.**
(ಪುಟ ವಿನ್ಯಾಸಕರು)
**ಪುನೀತ್ ಡಿ.**
(ತಾಂತ್ರಿಕ ಸಹಾಯಕರು)

**ಮಾರ್ಗದರ್ಶಕ ಮಂಡಳಿ**

**ಪ್ರೊ. ರಮೇಶ್. ಬಿ,**
ಮಾನ್ಯ ಕುಲಪತಿಗಳು.
**ನವೀನ್ ಜೋಸೆಫ್. ಎ,**
ಮಾನ್ಯ ಕುಲಸಚಿವರು.
**ಪ್ರೊ.ರಮೇಶ್.ಬಿ. ಕುಡೇನಟ್ಟಿ**
ಕುಲಸಚಿವರು–ಮೌಲ್ಯಮಾಪನ.
**ಎಂ.ವಿ. ವಿಜಯಲಕ್ಷ್ಮಿ ,**
ಮಾನ್ಯ ವಿತ್ತಾಧಿಕಾರಿಗಳು.
**ಪ್ರೊ. ಕೆ.ಆರ್.ಜಲಜಾ,**
ಡೀನರು, ವಾಣಿಜ್ಯ ನಿಕಾಯ.
**ಪ್ರೊ. ಜ್ಯೋತಿ ವೆಂಕಟೇಶ್,**
ಡೀನರು, ಕಲಾ ನಿಕಾಯ.
**ಪ್ರೊ. ಪಿ. ಆರ್. ಚೇತನ,**
ಡೀನರು, ವಿಜ್ಞಾನ ನಿಕಾಯ.

**ವಿದ್ಯಾರ್ಥಿ ಸಂಪಾದಕರು**

ನವ್ಯ ಪಿ, ಎಂಸಿಜೆ, ದ್ವಿತೀಯ
ಪೂಜಶ್ರೀ ಎಂಸಿಜೆ, ಪ್ರಥಮ
ಖುಷ್ಬು, ಎಂಸಿಜೆ, ದ್ವಿತೀಯ


**ತಿಂಗಳ ಬುತ್ತಿ**

**03/01/2026** – ಸಾವಿತ್ರಿಬಾಯಿ ಪುಲೆ ಜನ್ಮದಿನಾಚರಣೆ
**08/01/2026** – ಉಚಿತ ಪರೀಕ್ಷಾ ತರಬೇತಿ ಕೇಂದ್ರ ಉದ್ಘಾಟನೆ

**Printed and Published by The Registrar, Dr Manmohan Singh Bengaluru City University, Jnanajyothi Central College Campus, Ambedkar Veedhi, Bengaluru - 560001**